International Journal of Kannada Research
www.kannadajournal.com

ISSN: 2454–5813
IJSR 2015; 1(2): 40-44
© 2015 IJKS
www.kannadajournal.com
Received: 25-07-2015
Accepted: 29-08-2015

**ಡಾ.ಎಸ್.ಕೆ.ದೇವೇಗೌಡ**
ಸಹಾಯಕ ಪ್ರಾಧ್ಯಾಪಕರು,
ಇತಿಹಾಸ ವಿಭಾಗ, ಸರ್ಕಾರಿ
ಪ್ರಥಮ ದರ್ಜೆ ಕಾಲೇಜು,
ಚನ್ನಪಟ್ಟಣ, ರಾಮನಗರ ಜಿಲ್ಲೆ,
ಕರ್ನಾಟಕ ರಾಜ್ಯ, ಭಾರತ

Correspondence
**ಡಾ.ಎಸ್.ಕೆ.ದೇವೇಗೌಡ**
ಸಹಾಯಕ ಪ್ರಾಧ್ಯಾಪಕರು,
ಇತಿಹಾಸ ವಿಭಾಗ, ಸರ್ಕಾರಿ
ಪ್ರಥಮ ದರ್ಜೆ ಕಾಲೇಜು,
ಚನ್ನಪಟ್ಟಣ, ರಾಮನಗರ ಜಿಲ್ಲೆ,
ಕರ್ನಾಟಕ ರಾಜ್ಯ, ಭಾರತ

# ವೈಷ್ಣವ ಪಂಥದಲ್ಲಿ ಬರುವ ದಾಸಕೂಟ ಮತ್ತು ವ್ಯಾಸಕೂಟ ಪ್ರಾಮುಖ್ಯತೆಯ ಅವಲೋಕನ

**ಡಾ.ಎಸ್.ಕೆ.ದೇವೇಗೌಡ**

**DOI:** https://doi.org/10.22271/24545813.2015.v1.i2a.889

**ಪೀಠಿಕೆ**

ಇಡೀ ಜಗತ್ತಿನ ಧಾರ್ಮಿಕ ಚರಿತ್ರೆಯಲ್ಲಿ ಒಂದೊಂದು ರಾಷ್ಟ್ರ, ದೇಶ ಹಾಗೂ ಪ್ರಾಂತ್ಯಗಳು ತಮ್ಮದೇ ಕೂಡ ಆದಂತಹ ಧರ್ಮ, ದೇವರು, ಅವರಿಂದ ಪ್ರತಿಪಾದಿತಗೊಂಡಿರುವ ಬೋಧನೆಗಳು, ಆಚಾರ – ವಿಚಾರ ಹಾಗೂ ಆಚರಣೆಗಳನ್ನು ಚಾಚೂ ತಪ್ಪದೇ ಅಳವಡಿಸಿಕೊಂಡು ಬರಲಾಗಿರುತ್ತದೆ. ಹಾಗೆಯೇ ಆಯಾ ರಾಷ್ಟ್ರಗಳು ತಮಗೆ ಹೆಚ್ಚು ಇಷ್ಟವಾಗುವ ಧರ್ಮ ಮತ್ತು ಅದರಿಂದ ಮೂಡಿಬಂದಿರುವ ಧಾರ್ಮಿಕತೆಯನ್ನು ಮಾತ್ರ ಅನುಸರಿಸಿಕೊಂಡು ಬದುಕುತ್ತಿರುವುದು ಕೂಡ ಕಂಡುಬರುತ್ತದೆ. ಇದೇ ಧರ್ಮ ಮತ್ತು ಧಾರ್ಮಿಕತೆಯಲ್ಲಿ ಕೆಲವು ವರ್ಗಗಳು ಅಥವಾ ಗುಂಪುಗಳು ವಿಭಜಿತಗೊಂಡು ಪಂಥಗಳಾಗಿರುತ್ತವೆ. ಅವುಗಳು ಪ್ರತ್ಯೇಕಗೊಂಡು ತಮ್ಮದೇ ಆದಂತಹ ಗುಂಪು ಅಥವಾ ಪಂಥವನ್ನು ಸೃಷ್ಟಿಸಿಕೊಂಡಿರುವುದನ್ನು ಗುರುತಿಸಬಹುದು.

ವೈಷ್ಣವ ಪಂಥವು ಶೈವ ಪಂಥ, ಸ್ಮಾರ್ಥ ಸಂಪ್ರದಾಯ ಮತ್ತು ಶಾಕ್ತ ಪಂಥದ ಜೊತೆಗೆಯೇ ಹಿಂದೂಧರ್ಮದ ಪ್ರಮುಖ ಶಾಖೆಗಳ ಪೈಕಿ ಒಂದಾಗಿರುತ್ತದೆ. ಈ ವೈಷ್ಣವ ಪಂಥವು ಪರಮಶ್ರೇಷ್ಠ ಭಗವಂತನಾಗಿರುವ ಮಹಾವಿಷ್ಣುವಿನ ಪೂಜ್ಯ ಭಾವನೆಯ ಮೇಲೆ ಹೆಚ್ಚು ಹೆಚ್ಚು ಕೇಂದ್ರೀಕೃತವೇ ಆಗಿರುತ್ತದೆ ಎಂಬುದನ್ನು ಗುರುತಿಸಬಹುದು. ವೈಷ್ಣವ ಪಂಥದವರು ಮಹಾವಿಷ್ಣುವಿನ ಪರಮಾಪ್ತ ಅನುಯಾಯಿಗಳು. ಇವರು ಭಗವಂತನಾಗಿರುವಂತಹ ವಿಷ್ಣು ಮತ್ತು ಅವನ ದಶಾವತಾರಗಳಿಗೆ ಹೆಚ್ಚಿನ ರೀತಿಯಲ್ಲಿಯೇ ಪ್ರಾಮುಖ್ಯತೆಯನ್ನು ಕೊಡುವವರು. ಹಾಗೆಯೇ ಬಹುಮುಖ್ಯವಾಗಿ ಪ್ರತ್ಯೇಕವಾಗಿಸಲ್ಪಟ್ಟಿರುವ ಏಕದೇವತಾವಾದವನ್ನು ಏಕದೇವನಿಷ್ಠೆ ಎಂದು ಪ್ರಚಾರ ಮಾಡುವ ಜೀವನದ ಒಂದು ಮಾರ್ಗದಲ್ಲಿ ನಡೆಯುವವರೇ ಆಗಿದ್ದಾರೆ.

ಜಗತ್ತಿನ ಧಾರ್ಮಿಕ ಹಾಗೂ ಭಕ್ತಿಮಾರ್ಗದ ಪರಂಪರೆಯ ಘನೀಭೂತ ಚರಿತ್ರೆಯನ್ನು ಒಮ್ಮೆ ಸಿಂಹಾವಲೋಕನ ಮಾಡಿದಾಗ; ಕೆಲವು ಬೆರಳೆಣಿಕೆಯಷ್ಟು ಧರ್ಮಗಳನ್ನು ಹೊರತುಪಡಿಸಿದರೆ, ಇನ್ನುಳಿದ ಎಲ್ಲಾ ಧರ್ಮಗಳು ಹಾಗೂ ಅದರ ಸಂಸ್ಥಾಪಕರೂ ಕೂಡ ಒಂದು ಒಪ್ಪುವ ಸಾರ್ವಕಾಲಿಕವಾದಂತಹ ಸತ್ಯವೆಂದರೆ, ಅದುವೇ ದೇವರ ಅಸ್ತಿತ್ವವೇ ಆಗಿರುತ್ತದೆ. ವಲ್ಲಭಾಚಾರ್ಯರು ಮತ್ತು ಅವರ ಪುತ್ರ ವಿಠ್ಠಲನಾಥ ಅವರಂತಹ ಅನೇಕ ಪ್ರಮುಖವಾಗಿದ್ದ ಆಧ್ಯಾತ್ಮಿಕ ಹಾಗೂ ಧಾರ್ಮಿಕ ವ್ಯಕ್ತಿತ್ವಗಳ ಅನುಗ್ರಹ ಮತ್ತು ಪ್ರತಿಪಾದನೆಯಿಂದಲೇ ಭಾರತ ಮತ್ತು ಕರ್ನಾಟಕದಲ್ಲಿ ವೈಷ್ಣವ ಧರ್ಮ ಆದರ ಪ್ರಮುಖ ಭಾಗವೇ ಆಗಿರುವ ವೈಷ್ಣವ ಪಂಥವನ್ನು ಪ್ರಚಾರ ಪಡಿಸಲು ಸಾಧ್ಯವಾಗಿರುತ್ತದೆ. ಈ ಪಂಥದ ಅನುಯಾಯಿಗಳೇ ಆಗಿದ್ದ ಸೂರದಾಸಿ ಅವರು ಸ್ಥಳೀಯ ಭಾಷೆಯಲ್ಲಿ ಸುರ್–ಸರಾವಳಿಯನ್ನು ರಚಿಸಿದವರು. ಏಕನಾಥ್ ಮತ್ತು ತುಕಾರಾಂ ಅವರುಗಳು ಹತ್ತಿರದ ಮಹಾರಾಷ್ಟ್ರ ರಾಜ್ಯದಲ್ಲಿನ ಭಕ್ತಿ ಕವಿಗಳೇ ಆಗಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ವ್ಯಾಸರಾಯರಿಂದ ಹೆಚ್ಚು ಜನಪ್ರಿಯಗೊಳಿಸಿದ ಭಕ್ತಿಮಾರ್ಗದ ಚಳುವಳಿಯೂ ಅಂತಿಮವಾಗಿ ದಾಸಕೂಟ ಹಾಗೂ ವ್ಯಾಸಕೂಟ ಚಳುವಳಿಯಾಗಿ ಇದು ಅಂತಿಮವಾಗಿ ಭಾರತೀಯ ಸಾಮಾಜಿಕ ಹಾಗೂ ಧಾರ್ಮಿಕ ವ್ಯವಸ್ಥೆಯ ಕಟ್ಟಕಡೆಯ ಜನವರ್ಗವೇ ಆಗಿರುವ ಕೆಳವರ್ಗದವರ ಜನಪ್ರಿಯ ಚಳುವಳಿಯೇ ಆಗಿ ಹೆಚ್ಚು ಹೆಚ್ಚು ಹೊರಹೊಮ್ಮಿರುತ್ತದೆ.

ಕರ್ನಾಟಕ ರಾಜ್ಯದಲ್ಲಿನ ಆಧ್ಯಾತ್ಮಿಕ ಮತ್ತು ಧಾರ್ಮಿಕ, ಸಾಂಸ್ಕೃತಿಕ ಚಾರಿತ್ರಿಕ ಪರಂಪರೆಯಲ್ಲಿ ದಾಸಕೂಟ ಮತ್ತು ವ್ಯಾಸಕೂಟದ ಸ್ಥಾನವಂತೂ ಒಂದು ವಿಶಿಷ್ಟ ಹಾಗೂ ವಿನೂತನವಾಗಿರುವಂತಹ ಮಾದರಿಯೇ ಆಗಿರುತ್ತದೆ. ಭಾರತದಲ್ಲಿ ಶತಶತಮಾನಗಳಿಂದ ಮೌಖಿಕ ಹಾಗೂ ವಂಶಪರಂಪಾರ್ಯವಾಗಿ ಹರಿದುಬಂದಿರುವಂತಹ ಬದುಕಿನ ಆದರ್ಶನೀಯ ಮೌಲ್ಯಗಳನ್ನು ಇಲ್ಲಿನ ಜನಸಾಮಾನ್ಯರಿಗೆ ಸ್ಥಳೀಯವಾಗಿದ್ದ ಅವರೇ ರೂಢಿಸಿ ಬೆಳೆಸಿಕೊಂಡು ಬಂದಿದ್ದಂತಹ ಭಾಷಾ ಪ್ರಕಾರದಲ್ಲಿಯೇ ಮೆಟ್ಟಿಸಿದವರು. ಹಾಗೆಯೇ; ಜನತೆಯಲ್ಲಿ ತಮ್ಮ ಆಧ್ಯಾತ್ಮಿಕ ಕೀರ್ತನೆ ಹಾಗೂ ಪದ್ಯಗಳು ಮನರಂಜನೆಯ ಮೂಲಕ ಇವರ ಮನೋವಿಲಾತೆಯನ್ನು ವಿಸ್ತರಿಸುವಲ್ಲಿ ಯಶಸ್ವಿಯಾಗಿ ಸಾಧಿಸಿ ತೋರಿಸಿದವರು. ಈ ನೆಲೆದ ಭಕ್ತಿಯ ಪರವಶತೆಗೆ ಖ್ಯಾತಿಗಳಿಸಿರುವ ದಾಸಕೂಟ ಹಾಗೂ ವ್ಯಾಸಕೂಟರೇ ಆಗಿರುತ್ತಾರೆ.

ಕರ್ನಾಟಕ ರಾಜ್ಯದಲ್ಲಿ ಧಾರ್ಮಿಕ ಮತ್ತು ಆಧ್ಯಾತ್ಮಿಕ ಕ್ಷೇತ್ರಗಳಲ್ಲಿ ದಾಸಕೂಟ ಹಾಗೂ ವ್ಯಾಸಕೂಟಗಳು ಎರಡು ಹರಿದಾಸರ ಪ್ರಧಾನವಾಗಿರುವ ವಿಭಾಗಗಳೇ ಆಗಿರುತ್ತವೆ. ಈ ಕೂಟಗಳು ಕೂಡ ಮೂಲದಲ್ಲಿ ಒಂದೇ ಮಾದರಿಯ ತತ್ವವನ್ನು ಅಳವಡಿಸಿಕೊಂಡಿರುತ್ತದೆ. ಅಂದರೆ ಮಹಾವಿಷ್ಣುವಿನ ಭಾವ–ಬಂಧಗಳನ್ನು ಹರಿಕೃಷ್ಣರ ದಿವ್ಯಾದರ್ಶನಗಳನ್ನು ತಮ್ಮ ಕೀರ್ತನೆಗಳು ಹಾಗೂ ಪದ್ಯಗಳ ಮುಖೇನ ಜನಸಾಮಾನ್ಯರಿಗೆ ಹರಡುವುದೇ ಇವರ ದಿನನಿತ್ಯದ ಕಾಯಕವೇ ಆಗಿತ್ತು. ಈ ಕೂಟಗಳು ಕೂಡ ಭಕ್ತಿಯ ಮಾರ್ಗದಲ್ಲಿ ಪರವಶರೇ ಆಗಿದ್ದರು. ಹಾಗೆಯೇ ಪ್ರತಿಯೊಬ್ಬ ಮನುಷ್ಯನು ಸುಖವನ್ನು ಮಾತ್ರ ಬಯಸುವುದು ಕಂಡುಬರುತ್ತದೆ. ಆದರೆ, ಯಾರಿಗೂ ಕೂಡ ದುಃಖ ಅನ್ನುವುದೇ ಬೇಡವಾಗಿದೆ. ಆದ್ದರಿಂದಲೇ ಈ ದುಃಖರಹಿತವಾದ ಸುಖವನ್ನು ತಂದುಕೊಡುವ ಸರ್ವಸಮರ್ಥನಾದವನು ಮಾತ್ರ ಆ ಭಗವಂತನೊಬ್ಬನೇ ಅವನು ಈ ಜಗತ್ತಿನಲ್ಲಿರುವಂತಹ ಪ್ರತಿಯೊಂದು ಜೀವಚರರನ್ನು ಕಾಪಾಡುತ್ತಾನೆ. ಜೀವವಿರುವ ಎಲ್ಲರೂ ಅವನಿಗೆ ದಾಸರೇ ಆಗಿದ್ದಾರೆ. ಹಾಗೆಯೇ ಭಾರತೀಯ ಸನಾತನ ಪರಂಪರೆಯಲ್ಲಿ ವೈಷ್ಣವ ಪಂಥದಲ್ಲಿ ದಾಸಕೂಟ ಹಾಗೂ ವ್ಯಾಸಕೂಟಕ್ಕೆ ಉನ್ನತ ಹಾಗೂ ಮಹತ್ವದ ಸ್ಥಾನವೇ ಇದೆ.

ಕರ್ನಾಟಕದ ಭಕ್ತಿಮಾರ್ಗದ ಸಾಮಾಜಿಕ, ಧಾರ್ಮಿಕ ಹಾಗೂ ಆಧ್ಯಾತ್ಮಿಕ ಕ್ಷೇತ್ರಗಳಲ್ಲಿ ದಾಸಪಂಥವೂ ಒಂದು ಘನ ಸಂಚಲನವನ್ನೇ ಮೂಡಿಸಿರುತ್ತದೆ. ಈ ನೆಲೆ ಮತ್ತು ಹಿನ್ನೆಲೆಯೊಳಗೆ ಈ ಪಂಥವನ್ನು ಒಮ್ಮೆ ಪರಿವೀಕ್ಷಿಸಿದಾಗ; ವೈದಿಕ ಧರ್ಮದ ಪಂಥಗಳಲ್ಲಿ ಪ್ರಮುಖವಾಗಿರುವ ವೈಶ್ಣವ ಪಂಥದ ದೀಕ್ಷೆಯನ್ನು ಪಡೆದುಕೊಂಡು ಈ ದಾಸಪಂಥದವರು. ಹೀಗೆ ವೈಷ್ಣವ ದೀಕ್ಷೆಯನ್ನು ಪಡೆದು ಆ ಪಂಥದಲ್ಲಿನ ಆಚಾರ–ವಿಚಾರ ತತ್ವಗಳನ್ನು ಒಪ್ಪಿಕೊಂಡು ಅವುಗಳನ್ನು ಇತರ ಜನವರ್ಗಗಳಿಗೆ ಪ್ರಚಾರ ಮಾಡಿರುವ ಹಾಗೂ ಮಾಡುತ್ತಿರುವಂತಹ ಒಂದು ಸಮೂಹ ಅಥವಾ ಗುಂಪು ಅಥವಾ ಪಂಥವೆಂದೇ ಗುರುತಿಸಬಹುದು. ಈ ದಾಸ ಪಂಥದಂತಹ ಆರಾಧನೆ ಹಾಗೂ ಪೂಜನೀಯ ದೈವತ್ವ, ದೈವವೂ ಮಹಾವಿಷ್ಣುವೇ ಆಗಿರುತ್ತಾನೆ ಅಥವಾ ಆತನ ದಶಾವತಾರಗಳಲ್ಲಿ ಯಾವುದಾದರೂ ಒಂದನ್ನು ಪೂಜಿಸುತ್ತಾರೆ. ಅದರಲ್ಲೂ ಪ್ರಮುಖವಾಗಿ ಶ್ರೀಕೃಷ್ಣ, ಹರಿ, ವಾಸುದೇವ, ಶ್ರೀರಾಮ ಹೀಗೆ ಕರೆದುಕೊಳ್ಳುತ್ತಾರೆ. ದಾಸಪಂಥದವರು ಮಹಾವಿಷ್ಣುವಿನ ಪಾರಮ್ಯವನ್ನು ಹೆಚ್ಚು ಹೆಚ್ಚು ಪ್ರಚಾರ ಹಾಗೂ ಅನುಷ್ಠಾನಕ್ಕೆ ತಂದಿದ್ದರಿಂದ ಅವರನ್ನು 'ಹರಿದಾಸರು' ಎಂದೂ ಪ್ರಸಿದ್ಧರೇ ಆಗಿದ್ದಾರೆ. ಕರ್ನಾಟಕ ಸಂದರ್ಭದ 12ನೇ ಸತಮಾನದಲ್ಲಿ ಬಸವಾದಿ ಘನಶರಣರು ವಚನ ಸಾಹಿತ್ಯ ಅಥವಾ ಅದರ ಪಠಣದಲ್ಲಿ 'ಹರ'ಪಾರಮ್ಯವನ್ನು ಬೋಧಿಸುತ್ತಾ ಬಂದಿರುತ್ತದೆ ಎಂಬುದನ್ನು ಗುರುತಿಸಲಾಗಿದೆ. ಈ ದಾಸ ಪಂಥದ ಪರಂಪರೆಯಲ್ಲಿ 'ಮಹಾವಿಷ್ಣು' ಅಥವಾ 'ಹರಿ' ನಾಮಗಳನ್ನು ತಮ್ಮ ಪದ್ಯಗಳು ಹಾಡುಗಳು ಹಾಗೂ ಕೀರ್ತನೆಗಳ ಮುಖೇನ ಜನವರ್ಗಕ್ಕೆ ಭಕ್ತಿಯ ರೂಪದಲ್ಲಿ ಪ್ರಚಾರಪಡಿಸುತ್ತಾ ಬಂದಿರುತ್ತಾರೆ.

ದಾಸಕೂಟದ ಉಗಮ ಹಾಗೂ ವಿಕಾಸದ ಬಗೆಗೆ ಹೇಳುವುದೇನೆಂದರೆ; ದಾಸರ ಕೂಟ ಎಂದರೆ; ಹಲವು ದಾಸರು ಸೇರಿಕೊಂಡಿರುವ ಒಂದು ಗುಂಪು ಅಥವಾ ಸಮೂಹವೇ ದಾಸಕೂಟವಾಗಿದೆ. ಇದು ಹೀಗೆ ಸಮಾನವಾದ ಅರ್ಥವನ್ನು ಕೂಡ ಕೊಟ್ಟಿರುವುದನ್ನು ಗುರುತಿಸಬಹುದು. ಆದರೆ, ಈ ದಾಸಕೂಟಕ್ಕೆ ಸಂಬಂಧಿಸಿದಂತಹ ಸಮಾನವಾದ ಪದದ ಪೂರ್ವ ವಿಧವಾದ ದಾಸ ಎಂಬುದು ಮಹಾವಿಷ್ಣುವಿನ ಅವತಾರದಲ್ಲಿ ಬರುವ ಶ್ರೀಕೃಷ್ಣ ಅಥವಾ ಹರಿಯ ಸಾಹಿತ್ಯಕ್ಕೆ ಹೊಂದಾಣಿಕೆಯೇ ಆಗಿ ಅದು ವಿವಿಧ ಅರ್ಥ ಛಾಯೆಗಳಲ್ಲಿ ಹೆಚ್ಚಿನ ರೀತಿಯಲ್ಲಿಯೇ ಬಳಕೆಯಾಗುವುದನ್ನು ಗುರುತಿಸಬಹುದು.

ಕರ್ನಾಟಕದ ಭಕ್ತಿಮಾರ್ಗದ ಪರಂಪರೆಯಲ್ಲಿ ಅಗ್ರಗಣ್ಯರೇ ಆಗಿರುವಂತಹ ಮಧ್ವಾಚಾರ್ಯರು ಬೋಧಿಸಿದಂತಹ 'ದ್ವೈತ' ಸಿದ್ಧಾಂತ ಪ್ರಕಾರ ಪರಮಾತ್ಮ ಒಬ್ಬನೇ, ಆತನೇ ಶ್ರೀಹರಿ ಇನ್ನು ಉಳಿದವರೆಲ್ಲರೂ ಕೂಡ ಆತನ ದಾಸರೇ ಆಗಿದ್ದಾರೆ. ಹರಿಯು ನಿತ್ಯ ಜೀವವೂ ನಿತ್ಯವೇ ಎಂದರೆ; ಈ ಹರಿ ದಾಸರಿಬ್ಬರು ಯಾವಾಗಲೂ ಕೂಡ ಇರುವವರೇ ಎಂದು ಹೇಳಲಾಗಿದೆ. ಆದ್ದರಿಂದಲೇ, ಈ ದೃಷ್ಟಿಯಿಂದ ದಾಸಕೂಟವೂ ಅನಾದಿಯಾಗಿದೆ. ಹುಟ್ಟಿದುದಲ್ಲ ಬಂದದ್ದು, ಹಾಗಾಗಿಯೇ, ಶ್ರೀಕೃಷ್ಣದೇಮೋ ಪರಮಾತ್ಮನಾದ ಮಹಾವಿಷ್ಣುವಿನ ಪ್ರಪ್ರಥಮ ದಾಸಿ, ಬ್ರಹ್ಮ ವಾಯು, ಸರಸ್ವತಿ, ಭಾರತಿ, ಶೇಷ, ಗರುಡ ಹಾಗೂ ರುದ್ರಾದಿಗಳು ಕೂಡ ಅನಂತರದಲ್ಲಿ ಶ್ರೀಕೃಷ್ಣ ದೇವಿಯನ್ನೇ ಅನುಸರಿಸಿ ಬಂದವರೇ ಆಗಿದ್ದಾರೆ. ಹೀಗೆ ಒಂದಲ್ಲ ಒಂದು ಬಗೆಯಲ್ಲಿ ಎಲ್ಲರೂ ಆ ಭಗವಂತನಾದ ಮಹಾವಿಷ್ಣುವಿನ ದಾಸರೇ ಎಂದು ಕೂಡ ಹೇಳಬಹುದು.

ಕರ್ನಾಟಕ ಸಂದರ್ಭದಲ್ಲಿನ ಎರಡು ಹರಿಕೂಟಗಳಲ್ಲಿ ದಾಸಕೂಟವೂ ಕೂಡ ಒಂದಾಗಿದೆ. ಇದು ಭಕ್ತಿಯಲ್ಲಿನ ಮತ್ತು ಅದರೊಳಗಿನ ಒಂದು ಬಹುದೊಡ್ಡ ಗುಂಪೇ ಆಗಿದೆ. ಈ ದಾಸಕೂಟವು ಶ್ರೀಕೃಷ್ಣನ ಹೆಸರಿನ ಹರಿನಾಮವನ್ನು ಹೆಚ್ಚು ಪಠಿಸುತ್ತಿರುವವರು. ಇದು ದೇವರಿಗೆ ನೀಡಿರುವ ಭಕ್ತಿಯ ಆಧ್ಯಾತ್ಮಿಕ ಅಭ್ಯಾಸದ ಮೇಲೆಯೆ ಕೇಂದ್ರೀಕರಿಸುವಂತಹ ಏಕದೇವತಾವಾದಿ ವೈದಿಕ ಹಾಗೂ ವೈಷ್ಣವ ಪಂಥದಲ್ಲಿನ ಧಾರ್ಮಿಕ ಭಕ್ತಿಯ ಚಳವಳಿಗಳಲ್ಲಿ ಒಂದಾಗಿರುತ್ತದೆ. ಈ ಕೂಟವೂ ಸರ್ವೇಸಾಮಾನ್ಯವಾಗಿ ಮಹಾವಿಷ್ಣುವಿನ ಆರಾಧನೆಯೇ ಎಂಬಂತಹ ಅರ್ಥಪೂರ್ಣತೆ ಬರುತ್ತದೆ. ಈ ದಾಸಕೂಟವು ದಕ್ಷಿಣ ಭಾರತದಲ್ಲಿ ಆಳಿದ ವಿಜಯನಗರ ಸಾಮ್ರಾಜ್ಯದಲ್ಲಿ 12 ಮತ್ತು 13ನೇ ಶತಮಾನದಲ್ಲಿ ಹರಿದಾಸ ಚಳುವಳಿಯು ಆಧುನಿಕ ಕರ್ನಾಟಕ ಪ್ರದೇಶದಿಂದಲೇ ಹರಡುತ್ತದೆ ಎಂದು ಗುರುತಿಸಲಾಗಿದೆ. ಬಹುಮುಖ್ಯವಾಗಿ ದ್ವೈತ ಸಿದ್ಧಾಂತವನ್ನು ಬೋಧಿಸಿದಂತಹ ಮಧ್ವಾಚಾರ್ಯರ ಸಂದೇಶಗಳನ್ನು ಕನ್ನಡದ ಮೂಲ ತಿಳಿಸುವುದು. ಈ ದಾಸಕೂಟದ ಪ್ರಧಾನ ಪಾತ್ರವೇ ಆಗಿತ್ತು. ಹಾಗೆಯೇ, ಕನ್ನಡ ಜನರಿಗೆ ಅವರ ಭಾಷೆಯಲ್ಲಿಯೇ ದಾಸಕೂಟದ ಕೆಲವು ಪ್ರಮುಖ ಸಂತರ ಬೋಧಿಸಿದರು. ಅವರುಗಳೆಂದರೆ; ಪುರಂದರದಾಸ, ಕನಕದಾಸ, ವಿಜಯದಾಸ ಹಾಗೂ ಜಗನ್ನಾಥದಾಸರು.

ಹಾಸನ ಜಿಲ್ಲೆಯ ಬೇಲೂರು ಶ್ರೀಕೇಶವದಾಸರು ತಮ್ಮ ಶ್ರೀಕರ್ನಾಟಕ ಭಕ್ತ ವಿಜಯ ಎಂಬ ಗ್ರಂಥದಲ್ಲಿನ ಭಾಗವತ ಧರ್ಮ ಮತ್ತು ದಾಸಕೂಟ ಈ ಎರಡು ಮಾತುಗಳನ್ನು ಒಂದೇ ಅರ್ಥದಲ್ಲಿ ವ್ಯವಹರಿಸಿರುವ ಅವರು ನಾರದ ಮಹಾಮುನಿಯಿಂದ ಭಾಗವತಧರ್ಮ ಆರಂಭವಾಯಿತು ಎಂದು ಹೇಳಿದ್ದಾರೆ. ಚಾರಿತ್ರಿಕವಾಗಿ ಹೇಳುವುದಾದರೆ; ಕನ್ನಡ ಪ್ರದೇಶದಲ್ಲಿ ಭಕ್ತಿಮಾರ್ಗದ

ಮುಖೇನ ಒಂದು ಹೊಸ ಬಗೆಯ ಆಧ್ಯಾತ್ಮಿಕ ಸಾರವನ್ನು ಈ ನೆಲಕ್ಕೆ ಸಾರಿದಂತಹ ಮಧ್ವಾಚಾರ್ಯರು ಪ್ರತಿಪಾದಿಸಿ ಪ್ರವರ್ಧಮಾನಕ್ಕೆ ತಂದಿರುವ ದ್ವೈತ ತತ್ವದ ತಳಹದಿಗಳನ್ನು ಹರಿ ಪರಮಾಪ್ತ ಭಕ್ತರು ನಾಡಿನಾದ್ಯಂತ ಪ್ರಸಾರ ಮಾಡಿದ ದಾಸರನ್ನೆ 'ದಾಸ ಪಂಥ' 'ದಾಸಕೂಟ' ಎಂದು ಕರೆಯಲಾಗುತ್ತದೆ. ಆದ್ದರಿಂದ ಪ್ರಸ್ತುತ ಈ 'ದಾಸಕೂಟ' ಅಥವಾ 'ದಾಸಪಂಥ' ಎಂಬುದನ್ನು ತಳಸ್ಪರ್ಶಿಯಾಗಿ ಶೋಧಿಸಿದಾಗ; 'ದಾಸ' ಎಂಬುದು ಸೇವಕ ಎಂಬುದಕ್ಕೆ ಸಮನಾಗುತ್ತದೆ. ಹಾಗೆಯೇ ಕೂಟ ಎಂದರೆ; ಒಂದು ಪಂಥ ಎಂಬುದಕ್ಕೆ ಸಮನಾಗಿರುತ್ತದೆ. ಅಂದರೆ; ಒಂದೇ ಧ್ಯೇಯ, ಉದ್ದೇಶ ಹಾಗೂ ಸಮಾನ ಮನಸ್ಕರೇ ಸೇರಿಕೊಂಡು ಕಟ್ಟಿಕೊಂಡಿರುವ ಒಂದು ಕೂಟವೇ ಆಗಿರುತ್ತದೆ. ಆದ್ದರಿಂದ, ಪ್ರಸ್ತುತ ವಿಷಯದ ನೆಲೆಯಲ್ಲಿ ಯೋಚಿಸಿದಾಗ; ಮಹಾವಿಷ್ಣುವಿನ ಶ್ರೀಕೃಷ್ಣ ವಾಸುದೇವ ಹಾಗೂ ಹರಿಯ ಭಕ್ತರೇ ಸೇರಿ ಕಟ್ಟಿಕೊಂಡಿರುವ ಕೂಟವೇ 'ದಾಸಕೂಟ' ಆಗಿದೆ. ಹಾಗೆಯೇ ಭಾರತದಲ್ಲಿ ಪ್ರಾಂತ್ಯಗಳಿಗೆ ಸಾಂಸ್ಕೃತಿಕ ಪರಂಪರೆಯಲ್ಲಿ ಪರಂಪರಾನುಗತವಾಗಿಯೇ ಹುಟ್ಟಿ ಬಂದಿರುವಂತಹ ಭಕ್ತಿ ಮಹಾಪೂರಕ ಭಕ್ತಿಮಾರ್ಗ ಅಥವಾ ಭಕ್ತಿಪಂಥವೇ ಆಗಿರುತ್ತದೆ. ಈ ಭಕ್ತಿಪಂಥಕ್ಕೆ ಸರಿಸಮಾನವಾಗಿರುವುದೇ ಕರ್ನಾಟಕ ರಾಜ್ಯದಲ್ಲಿ ಕಟ್ಟಿಕೊಂಡಿರುವ ದಾಸಕೂಟ. ಒಟ್ಟಿನಲ್ಲಿ ಈ ದಾಸಕೂಟವೆಂದರೆ; ಭಕ್ತಿಮಾರ್ಗ ಅಂಥ ಭಕ್ತಿಪಂಥವೆಂದೇ ಅರ್ಥೈಸಬಹುದು.ಇದು ಕೂಡ ಈ ಹಾದಿಯಲ್ಲಿ ಸಾಗಿ ಮಹಾವಿಷ್ಣುವಿನ ವಿವಿಧ ಅವತಾರಗಳನ್ನು ಅಲ್ಲಿನ ಲೀಲೆಗಳನ್ನು ಕೀರ್ತನೆಗಳ, ಪದ್ಯಗಳು. ಹೀಗೆ ವಿವಿಧ ಬಗೆಯಲ್ಲಿ ಹಾಡುತ್ತಾ ಕುಣಿಯುತ್ತಾ ಹರಿಯನ್ನು ಸಂಸ್ಮರಣೆ ಮಾಡುತ್ತಾರೆ ದಾಸಕೂಟದವರು.

ದಾಸಕೂಟದವರು ಮತ್ತು ಅವರ ವೈಚಾರಿಕತೆಯನ್ನು ಗ್ರಹಿಸಿದಾಗ, ಇವರೆಲ್ಲರೂ ಬಹುಮುಖ್ಯವಾಗಿ ಬಾಹ್ಯ ಬದುಕಿನ ಆರಂಭಕ್ಕಿಂತಲೂ ಭಕ್ತಿ, ಪ್ರೀತಿ ಮತ್ತು ಮೈತ್ರಿಯತೆಯ ಪೂಜೆಯ ಮುಖೇನ ತಮ್ಮ ಆರಾಧನೆಯ ದೈವವೇ ಆಗಿರುವಂತಹ ಮಹಾವಿಷ್ಣುವಿನ ಅವತಾರವಾಗಿರುವ ಶ್ರೀಕೃಷ್ಣ, ಹರಿಯನ್ನು ಕಾಣಲು ಸಾಧ್ಯವೆಂದು ಈ ಜಗತ್ತಿಗೆ ತೋರಿಸಿದವರೇ ದಾಸಕೂಟದವರು ಎಂದು ಹೇಳಬಹುದು. ವಿಶೇಷವಾಗಿ ಈ ದಾಸಕೂಟದವರು ಮತ್ತು ಇದರ ಪ್ರತಿಪಾದಕರು ನಮ್ಮ ಕನ್ನಡನಾಡಿನ ಮೂಲನೆಲೆಯವರೇ ಆಗಿದ್ದಾರೆ. ಕನ್ನಡ ನೆಲದವರು ಎಂದೂ ಮಾತ್ರಕ್ಕೆ ಇವರಿಗೆ ಇಡೀ ದೇಶದಲ್ಲಿಯೇ ಸರ್ವವ್ಯಾಪಕವಾಗಿ ಚಾಲ್ತಿಯಲ್ಲಿದ್ದಂತಹ ಸಂಸ್ಕೃತ ಭಾಶೆಯೂ ತಿಳಿದಿರುವುದಿಲ್ಲ ಎನ್ನುವಂತಿಲ್ಲ. ಉತ್ತರ ಭಾರತದಲ್ಲಿನ ಘನ ಪಂಡಿತರನ್ನು ಸರಿಗಟ್ಟುವ ರೀತಿಯಲ್ಲಿ ಕನ್ನಡ ನಾಡಿನ ದಾಸಕೂಟದ ಪ್ರತಿಪಾದಕರು ಹಾಗೂ ಮಹಾವಿಷ್ಣುವಿನ ಅನುಯಾಯಿಗಳು ಕರಗತ ಮಾಡಿಕೊಂಡಿದ್ದರು ಎಂಬುದನ್ನು ಕೂಡ ಅಧ್ಯಯನದ ಮುಖೇನ ಗುರುತಿಸಬಹುದು. ಹೀಗೆ, ದಾಸಕೂಟದದ ಹರಿಭಕ್ತರೂ 13ನೇ ಶತಮಾನದಲ್ಲಿ ಆರಂಭಿಕಗೊಂಡ ತಮ್ಮ ಭಕ್ತಿಯ ವಾಹಿನಿಯೂ ದಾಸರು ತಮ್ಮ ಕೀರ್ತನೆಗಳು, ಪದ್ಯಗಳು ಹಾಗೂ ಸಾಹಿತ್ಯದ ಮೂಲಕ ಕನ್ನಡ ಸಾಹಿತ್ಯವನ್ನು ಕೂಡ ಶ್ರೀಮಂತಗೊಳಿಸಿದ್ದಾರೆ. ಈ ದಾಸಕೂಟದವರು ಹರಿಯ ನಾಮಗಳನ್ನು ಸಂಸ್ಕೃತ ಭಾಷೆಯಲ್ಲಿ ಘನಪಂಡಿತರಾಗಿದ್ದರೂ ಕೂಡ ಅದನ್ನು ಲೆಕ್ಕಿಸದೇ ಕನ್ನಡ ಭಾಷೆಯಲ್ಲಿ ಮಹತ್ವದ ಸಾಹಿತ್ಯ ರಚನಾ ಕಾರ್ಯವನ್ನು ಕೈಗೊಂಡಿದ್ದವರೇ ಆಗಿದ್ದಾರೆ. ಕನ್ನಡನಾಡಿಗೆ ಭಾಷೆ, ಭಾವ, ಶ್ರೀಮಂತಿಕೆಯನ್ನು ಹರಿದಾಸರು ತಂದು ಕೊಟ್ಟಿದ್ದಾದರೂ ಹರಿದಾಸ ಸಂಸ್ಕೃತಿ, ಹರಿದಾಸ ಸಾಹಿತ್ಯ ಎನ್ನುವುದು ಕನ್ನಡ ನಾಡಿಗೆಯೇ ನಿರ್ದಿಷ್ಟವಾದದೊಂದು ಭಕ್ತಿಯ ಪರಂಪರೆಗೆ ಹರಿದು ಸಾಗರದಂತೆ ಬರುವಂತಾಯಿತು. ಇವುಗಳೆಲ್ಲವೂ ಕೂಡ ದಾಸಕೂಟದವರು ಹಾಡುವಂತಹ ಹಾಡುಗಳಲ್ಲಿ ಕೀರ್ತನೆಗಳಲ್ಲಿ, ಪದ್ಯಗಳಲ್ಲಿ, ಕಂದಗಳಲ್ಲಿ ಇದ್ದು, ಅವುಗಳೆಲ್ಲವೂ ಮನುಷ್ಯನು ತಾನು ತಿಳಿಸಲು ಹೆಚ್ಚು ಸಹಾಯಕವೇ ಆಗಿರುವಂತಹ ತತ್ವ ಆದರ್ಶಗಳೇ ಆಗಿರುತ್ತವೆ. ದಾಸಕೂಟದಲ್ಲಿನ ಹರಿಭಕ್ತರು ತಮ್ಮ ಆರಾಧನೆಯ ದೈವ ಮಹಾವಿಷ್ಣು, ಶ್ರೀಕೃಷ್ಣ, ಶ್ರೀಹರಿ, ವಾಸುದೇವ ಹೀಗೆ, ಸಂಸ್ಮರಿಸುತ್ತಾ ಊರು ಊರು ಸುತ್ತುವುದು ಕಾಯಕವೇ ಆಗಿತ್ತು. ಇದರೊಟ್ಟಿಗೆ ಸಮಾಜದಲ್ಲಿನ ಅಂಕುಡೊಂಕುಗಳನ್ನು ತಿಳಿಹೇಳೂವ ತಿದ್ದಲು ಒಂದು ಆದರ್ಶನೀಯ ಮಾರ್ಗಗಳೇ ಆಗಿದವರು ಈ ದಾಸಕೂಟದವರು ಎನ್ನಬಹುದು. ಹಾಗೆಯೇ ಈ ಹರಿದಾಸ್ಸರ ಲಕ್ಷಣಗಳನ್ನು ವಿಜ್ಞದಾದ್ಸರು 'ಹರಿದಾಸ ಲಕ್ಷಣ ಸುಳಾದಿ' ಎಂಬ ಒಂದು ಸಳಾದಿಯಲ್ಲಿ ಹರಿದಾಸ್ದನ ಲಕ್ಷಣಗಳೇನು ಎನ್ನುವುದನ್ನು ಹೇಳಿದ್ದಾರೆ. ಅವುಗಳನ್ನು ಈ ಕೆಳಗಿನಂತೆಯೇ ದಾಖಲಿಸಲಾಗಿದೆ. ಹರಿದಾಸನಾಗುವವನು ದೀಕ್ಷೆಯನ್ನು ವಹಿಸುವಾಗ; ಹೀಗೆ, ಪ್ರಮಾಣ ಮಾಡುತ್ತಾನೆ. ಅವುಗಳೆಂದರೆ; ಶೃತಿ ಸ್ಮೃತಿ ಪುರಾಣ ಇತಿಹಾಸಗಳಲ್ಲಿ ನಂಬಿಕೆ ಇಡುತ್ತೇನೆ, ಸಾಲ ಮಾಡುವುದಿಲ್ಲ, ಸಾಲದೆನ್ನುವುದಿಲ್ಲ, ನಾಳೆಗಿರುವುದಿಲ್ಲ ಎಂದು ಪ್ರತಿಜ್ಞೆ ಮಾಡಿ, ಅದರಂತೆಯೇ ನಡೆಯುತ್ತೇನೆ, ಹರಿದಿನ ವ್ರತಾಚರಣೆ ಬಿಡುವುದಿಲ್ಲ, ದೈವನಿಂದೆ ಕೇಳಿದರೆ ಆತ್ಮಶುದ್ಧ ಮಾಡಿಕೊಳ್ಳುತ್ತೇನೆ, ಹರಿಸೇವೆಗೆ ಈ ಜೀವನ ಮೀಸಲು. ಹೀಗೆ ಗುರುತುಗಳು ಶಿಷ್ಯನ ಯೋಗ್ಯತೆಯನ್ನು ಸ್ವಪರೀಕ್ಷೆಗೆ ಒಳಪಡಿಸಿ, ಅನಂತರದಲ್ಲಿ ಅದು ಅವರಿಗೆ ಆತನು ಯೋಗ್ಯನೆನಿಸಿದರೆ ಮಾತ್ರ ಅಂಕಿತವನ್ನು ಕೊಡುತ್ತಾರೆ. ಏಕೆಂದರೆ, ಈ ದಾಸಕೂಟದಲ್ಲಿ ಗುರುಗಳು ಕೊಡುವಂತಹ ಅಂಕಿತಕ್ಕೆ ವಿಶೇಷವಾದ ಪ್ರಾಶಸ್ತ್ಯ ಸ್ಥಾನವೇ ಇದೇ ಎಂದು ದ್ವೈತ ಸಿದ್ಧಾಂತದ ಸೃಷ್ಟಿಕರ್ತರೇ ಆಗಿರುವ ಮಧ್ವಾಚಾರ್ಯರು ತಮ್ಮ ದ್ವಾದಶಸ್ತೋತ್ರದಲ್ಲಿ ತಮ್ಮ ಆಶ್ರಮ ನಾಮವಾದ ಆನಂದತೀರ್ಥವೆಂಬ ಅಂಕಿತವನ್ನು ಬಳಸಿದ್ದಾರೆ. ಅಂದರೆ ದಾಸಕೂಟದಲ್ಲಿ ದೀಕ್ಷೆಯನ್ನು ಪಡೆಯುವ ಪೂರ್ವದಲ್ಲಿ ಇರುವ ನಾಮಾಂಕಿತವೂ ದೀಕ್ಷೆಯ ಅನಂತರ ಗುರುವು ನೀಡಿದ ನಾಮಾಂಕಿತದಿಂದಲೇ ಮುಂದೆ ಸಾಗಿ ಹರಿಯ ಸ್ಮರಣೆಯನ್ನು ಜಗತ್ತಿಗೆ ಸಾರಬೇಕಾಗುತ್ತದೆ. ಆದ್ದರಿಂದಲೇ ದಾಸಕೂಟದಲ್ಲಿ ಅಂಕಿತಕ್ಕೆ ಹೀಗೆ, ಪ್ರಾಶಸ್ತ್ಯ ಹಾಗೂ ಸ್ಥಾನವೂ ಕೂಡ ಇರುವುದನ್ನು ಗ್ರಹಿಸಬಹುದು.

ದಾಸಕೂಟದಲ್ಲಿ ಗುರುಗಳು ನೀಡಿದ ದೀಕ್ಷೆಯಲ್ಲಿ ನೀಡಿದ ಅಂಕಿತದಲ್ಲಿ ಹೆಚ್ಚು ಹೆಸರು ಗಳಿಸಿದವರಲ್ಲಿ ಹಾಗೂ ಗೃಹಸ್ಥರಾಗಿದ್ದವರಲ್ಲಿ ಪುರಂದರದಾಸರು ಮೊದಲಿಗೆ ಬರುತ್ತಾರೆ. ಇದರ ಬಗೆಗೆ ಒಂದು ಪರಿವೀಕ್ಷಣೆಯನ್ನು ಮಾಡಿದಾಗ, ದಾಸಕೂಟದಲ್ಲಿ ಶ್ರೀಪಾದರಾಜರು 'ರಂಗವಿಠಲ' ಎಂಬ ನಾಮಾಂಕಿತದಲ್ಲಿ ಅವರ ಪ್ರಧಾನ ಶಿಷ್ಯರಲ್ಲಿ ಒಬ್ಬರಾದ ವ್ಯಾಸರಾಯರು ಕೃಷ್ಣ ಶ್ರೀಕೃಷ್ಣ ಎಂಬಂತಹ ನಾಮಾಂಕಿತದಲ್ಲಿ ಅನೇಕ ಕೀರ್ತನೆಗಳು ಹಾಗೂ ಸಾಹಿತ್ಯವೇ ರಚಿಸಿದ್ದಾರೆ. ಅನಂತರ ಬಂದವರೇ ಪುರಂದರದಾಸರು. ಇವರು ತಮ್ಮ ಗುರುಗಳಾದಂತಹ ವ್ಯಾಸರಾಯರು 'ಪುರಂದರದಾಸರು' ಎನ್ನುವಂತಹ ನಾಮಾಂಕಿತವನ್ನು ನೀಡಿದರು. ಇದು ಮುಂದೆ ದಾಸಕೂಟದಲ್ಲಿ ಹೆಚ್ಚು ಹೆಸರು ಮತ್ತು ಪ್ರಖ್ಯಾತವಾಗಿರುವ ವ್ಯಕ್ತಿತ್ವದ ಹೆಸರೇ ಆಗಿರುತ್ತದೆ.

ದಾಸಕೂಟದಲ್ಲಿನ ಹರಿದಾಸರು ಸಮಾಜದಲ್ಲಿನ ತತ್ವಗಳನ್ನು ತಪ್ಪದೇ ಖಂಡಿಸಿ ಪಾವಿತ್ರ್ಯತೆಯನ್ನು ಪುನೀತಗೊಳಲು ಬಂದರೇ ಆಗಿದ್ದಾರೆ. ಈ ಭಕ್ತಿಮಾರ್ಗದ ಹಾದಿಯಲ್ಲಿ ಭಾರತೀಯ ಸಾಮಾಜಿಕ ಹಾಗೂ ಧಾರ್ಮಿಕ ವ್ಯವಸ್ಥೆಯ ಪರಂಪರೆಯಲ್ಲಿ ಅಂತ್ಯಜರೆನಿಸಿದವರನ್ನು ಹರಿಜನರು ಎಂದು ಕರೆದವರೇ ಈ ಹರಿದಾಸರು. ಮಹಾವಿಷ್ಣುವಿನ ಅವತಾರವೇ ಆಗಿರುವ ಶ್ರೀಕೃಷ್ಣನ ಹಾಗೂ ಶ್ರೀಹರಿಯ ಅವತಾರದಲ್ಲಿ ಇವರನ್ನು ಬಿಟ್ಟು ಇನ್ನುಳಿದ ಎಲ್ಲಾ ಜೀವಿಗಳು ಕೂಡ ಈ ಶ್ರೀಹರಿಯ ದಾಸರೇ ಆಗಿರುತ್ತಾರೆ. ಆದ್ದರಿಂದಲೇ ಶ್ರೀಹರಿಗೆ

ದಾಸ್ಯರಾಗಿರಬಲ್ಲವರಲ್ಲಿ ಹರಿದಾಸರೇ. ಇವರಿಂದ ರೂಪಿತವಾದಂತಹ ಕೂಟ ಅಥವಾ ಪಂಥವೇ ದಾಸಕೂಟವಾಗಿರುತ್ತದೆ. ಒಂದರ್ಥದಲ್ಲಿ ಹೇಳುವುದಾದರೆ, ಭಾರತೀಯ ಸಂದರ್ಭದ ಭಕ್ತಿಮಾರ್ಗ ಹಾಗೂ ಆಧ್ಯಾತ್ಮಿಕ ಪರಂಪರೆಯಲ್ಲಿ ಮಹಾವಿಷ್ಣುವಿನ ಅವತಾರಿಗಳಲ್ಲಿ ನಂಬಿಕೆ ಇಟ್ಟು, ಅದರಲ್ಲೂ ಪ್ರಧಾನವಾಗಿ ಶ್ರೀಹರಿಯ ಆಧಾರಕರೆಲ್ಲರೂ ಕೂಡ ಹರಿದಾಸರು ಅಥವಾ ದಾಸಕೂಟ ಅಥವಾ ದಾಸಪಂಥದ ಸದಸ್ಯರೇ ಆಗಿರುತ್ತಾರೆ.

ಭಾರತೀಯ ಸಾಂಸ್ಕೃತಿಕ ಹಾಗೂ ಆಧ್ಯಾತ್ಮಿಕ ಭಕ್ತಿಯ ಪರಂಪರೆಯಲ್ಲಿ ಅನೇಕ ಅನೇಕ ಮಹಾವಿಷ್ಣುವಿನ ಪರಮಾಪ್ತ ಭಕ್ತರು ಬಂದು ಹೋಗಿದ್ದಾರೆ. ಅವರಲ್ಲಿ ದಾಸಕೂಟದವರೂ ಕೂಡ ಪ್ರಮುಖವಾಗಿ ಬರುವ ಒಂದು ಪರಂಪರೆಯೇ ಆಗಿರುತ್ತದೆ. ಕರ್ನಾಟಕ ರಾಜ್ಯದಲ್ಲಿ ದಾಸ ಸಾಹಿತ್ಯವು ದಾಸಕೂಟದ ಮುಖೇನ 15ನೇ ಮತ್ತು 16ನೇ ಶತಮಾನದಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿ ಇದು ಸೃಷ್ಟಿಯಾಗಿ ಬಳಕೆಗೆ ಬಂದಿರಬಹುದು ಎಂಬುದು ದಾಸ ಸಾಹಿತ್ಯದಿಂದಲೇ ಗುರುತಿಸಲಾಗಿದೆ. ಏಕೆಂದರೆ, ಈ ದಾಸ ಸಾಹಿತ್ಯದಲ್ಲಿ ದ್ವಿತೀಯ ಘಟ್ಟ ಎಂಬ ಗ್ರಂಥದಲ್ಲಿ ಪುರಂದರದಾಸರು ದಾಸಕೂಟವೆಂಬ ಪರಂಪರೆಗೆ ಮೊದಲಿಗರು ಎಂದು ದಾಖಲೀಕರಿಸಲಾಗಿದೆ. ಈ ನೆಲೆ ಮತ್ತು ಹಿನ್ನೆಲೆಯಿಂದಲೇ ದಾಸಕೂಟವೆಂದರೆ, ಒಂದೇ ಉದ್ದೇಶ ಹಾಗೂ ಮನೋಭಾವವುಳ್ಳಂತಹ ಅನೇಕ ಸದಸ್ಯರ ಗುಂಪೇ ಇದಾಗಿರುತ್ತದೆ. ಈ ದಾಸಕೂಟದವರು ಕನ್ನಡ ನಾಡಿನಲ್ಲಿ ಸಮಾಜದಲ್ಲಿ ಒಂದು ಭಕ್ತಿಮಾರ್ಗದ ಸಂಚಲನವೇ ಉಂಟುಮಾಡಿದವರು ಎಂದು ಗುರುತಿಸಬಹುದು.

ಒಟ್ಟಾರೆಯಾಗಿ ಹೇಳುವುದಾದರೆ; ದ್ವೈತ ಸಿದ್ಧಾಂತವನ್ನು ಚಾಲ್ತಿಗೆ ತಂದಿರುವ ಮಧ್ವಾಚಾರ್ಯರ ಪರಮಾಪ್ತ ಅನುಯಾಯಿ ಭಕ್ತರು ದಾಸ ಧರ್ಮ ದೀಕ್ಷೆಯನ್ನು ಪಡೆದುಕೊಂಡು ಮಹಾವಿಷ್ಣುವಿನ ಅಂಶವೇ ಆಗಿರುವ ಶ್ರೀಕೃಷ್ಣ ಮತ್ತು ಶ್ರೀಹರಿಯ ಭಕ್ತಿ ಪ್ರಚಾರದ ಕಾರ್ಯವನ್ನು ತಮ್ಮ ತಮ್ಮ ಆಧಾರ ಕೀರ್ತನೆಗಳು, ಪದ್ಯಗಳು ಹಾಗೂ ಸಾಹಿತ್ಯರಾಶಿಯ ಮುಖೇನ ಚಾಲ್ತಿಗೆ ತಂದ ಕೀರ್ತಿವಂತರು ದಾಸಕೂಟದವರು. ಇಂತಹ ಹರಿದಾಸನಿಗೆ ಒಂದು ಕೂಟವೇ ದಾಸಕೂಟವಾಗಿದೆ. ಹಾಗಾಗಿ ಈ ದಾಸಕೂಟದ ಪರಂಪರೆಯಲ್ಲಿ ಸರಿಸುಮಾರು ಆರುನೂರಕ್ಕೂ ಹೆಚ್ಚಿನ ದಾಸರು ಬಂದು ಹೋಗಿರುತ್ತಾರೆ ಎಂಬುದು ಇಂದು ಚರಿತ್ರೆಯೇ ಆಗಿದೆ.

ಭಕ್ತಿಚಳುವಳಿಯ ಪರಂಪರೆಯಲ್ಲಿ 'ದಾಸ' ಎಂಬ ಚರಿತ್ರೆಯಲ್ಲಿ ದಾಸಕೂಟ ಹಾಗೂ ವ್ಯಾಸಕೂಟ ಎಂಬುವವು ಅವಳಿ ಪದಗಳೇ ಆಗಿವೆ. ಆದ್ದರಿಂದಲೇ ದಾಸಕೂಟದ ಪ್ರಭಾವವನ್ನು ಚರ್ಚಿಸಿದ ಅನಂತರ ವ್ಯಾಸಕೂಟದ ಪ್ರಚಾರ ಮತ್ತು ಪ್ರಭಾವವನ್ನು ದಾಖಲಿಸುವುದು ಅತಿಸೂಕ್ತವೇ ಆಗಿರುತ್ತದೆ. ಇದು ಹೆಸರೇ ಸೂಚಿಸುವಂತೆ ಶ್ರೀವೇದವ್ಯಾಸರಾದ ಬಾದರಾಯಣರು ಈ ಕೂಟದಲ್ಲಿ ಮೊದಲಿಗರು ಅಥವಾ ಸಂಸ್ಥಾಪಕರೇ ಆಗಿದ್ದಾರೆ.

ಕರ್ನಾಟಕ ರಾಜ್ಯದಲ್ಲಿನ ಹರಿದಾಸ ಪರಂಪರೆಯಲ್ಲಿ ವ್ಯಾಸಕೂಟಕ್ಕೂ ಕೂಡ ಒಂದು ಮಾನ್ಯತೆ ಇದೆ. ಅಂದರೆ, ಹರಿದಾಸ ಪಂಥದ ದಾಸರುಗಳಲ್ಲಿ ಪ್ರಧಾನರಾದವರು ವ್ಯಾಸರಾಯರ ಸನ್ನಿಧಿಯಲ್ಲಿದ್ದ ಒಂದು ವಿದ್ವಾಂಸ ವರ್ಗ, ಸಂಸ್ಕೃತ ವಿದ್ಯೆಯಲ್ಲಿ ಅತ್ಯಂತ ಪಾಂಡಿತ್ಯ ಪ್ರೌಢಿಮೆಯನ್ನು ನಿಧಿಸಿದವರು. ಶಾಸ್ತ್ರವೇತ್ತವರು, ವೇದ, ಉಪನಿಷತ್ ಬ್ರಹ್ಮಸೂತ್ರಗಳನ್ನು ಗಹನವಾಗಿಯೇ ಅಧ್ಯಯನ ಮಾಡಿ ಅವುಗಳನ್ನು ಕರಗತ ಮಾಡಿಕೊಂಡರು. ಮಧ್ವಾಚಾರ್ಯರ ವೇದಾಂತದ ತತ್ವಸಾಧನೆಯಲ್ಲಿಯೂ ಕೂಡ ಉಪಾಂಗಗಳಾದ ಎಲ್ಲಾ ವಿದ್ಯೆಗಳಲ್ಲಿಯೂ ಅಪಾರವಾದ ನಿಷ್ಠಾವಂತರೇ ಆಗಿದ್ದವರು. ಯೋಗ್ಯತೆಯಾಗಲೀ, ಪದವಿಗಾಗಲೀ ಹರಿದಾಸರಿಗೆ ಅವರೊಡನೆ ಸಮಾನ ಪದವಿ ಬರುವುದಕ್ಕೆ ಸ್ವಲ್ಪಕಾಲ ಹಿಡಿದಿರುತ್ತದೆ. ಆ ವಿದ್ವಾಂಸರ ಗುಂಪಿಗೆ ವ್ಯಾಸಕೂಟವೆಂದು ಹೆಸರಿನಿಂದಲೇ ಕರೆಯಲಾಗಿರುತ್ತದೆ. ಈ ಕೂಟದಲ್ಲಿ ವ್ಯಾಸವೆಂದರೆ, ಶ್ರೀವೇದವ್ಯಾಸರು – ಬಾದರಾಯಣರು ಈ ವ್ಯಾಸಕೂಟಕ್ಕೆ ಸಾಹಿತ್ಯ ಶಾಸ್ತ್ರಗಳನ್ನು ಬಲ್ಲದವರು ಪಂಡಿತರು ವ್ಯಾಸಕೂಟದವರೆಂತಲೂ ಎಚ್ಚರಿಸಲಾಗಿದೆ. ಆದ್ದರಿಂದಲೇ ಈ ಕೂಟವೂ ಶ್ರೀಪಾದರಾಯಣ ಕಾಲಘಟ್ಟದಿಂದಲೂ ದಾಸವರ್ಗವೊಂದು ಸಂಘಟಿತಗೊಂಡಿದ್ದರೂ ಕೂಡ ಇದಕ್ಕೆ ಒಂದು ಸ್ಪಷ್ಟ ಸ್ವರೂಪ ಹಾಗೂ ಚಲನೆ ಬಂದಿದ್ದು ಮಾತ್ರ ಶ್ರೀವ್ಯಾಸರಾಯರ ಕಾಲದಲ್ಲಿಯೇ ಎಂದು ಹೇಳಬಹುದು. ಹಾಗೆಯೇ ಈ ಕೂಟಕ್ಕೆ ದೀಕ್ಷೆಯ ಕ್ರಮದ ಅಂಕಿತವೂ ಪ್ರಧಾನಗಳ ಪದ್ಧತಿಯೇ ಇರ್ದರ್ಲಲಿಯೂ ಕೂಡ ಚಾಲ್ತಿಯಲ್ಲಿತ್ತು. ಹೀಗೆ, ದಾಸಕೂಟಕ್ಕೆ ಪುರಂದರದಾಸರಿಂದ ಹೆಸರು ಬಂದಿದೆಯೇ ಹಾಗೆಯೇ ವ್ಯಾಸಕೂಟಕ್ಕೆ ಹೆಸರು ಬರಲು ಅದೇ ಸೂಚಿಸುವಂತೆ ವ್ಯಾಸಕೂಟ ಇದರ ಸಂಸ್ಥಾಪಕ ಪ್ರವರ್ತಕರೇ ಆಗಿದ್ದಾರೆ.

ಕರ್ನಾಟಕ ರಾಜ್ಯದಲ್ಲಿನ ಭಕ್ತಿಪರಂಪರೆಯಲ್ಲಿ ಹರಿದಾಸರ ಕೂಟಗಳಾದ ವ್ಯಾಸಕೂಟ ಹಾಗೂ ದಾಸಕೂಟಗಳೆಂಬ ಎರಡು ಹರಿಯ ಸಂಸ್ಮರಣೆಯ ಪಂಥಗಳೇ ಆಗಿರುತ್ತವೆ. ಇವುಗಳು ಶ್ರೀವ್ಯಾಸರಾಯರು ಹಾಗೂ ಅವರ ಶಿಷ್ಯರೇ ಆಗಿರುವಂತಹ ಪುರಂದರರನ ಅಪಾರ ಭಕ್ತರೇ ಆಗಿರುವ ಪುರಂದರದಾಸರ ಇವರ ಕಾಲದಿಂದಲೂ ಕೂಡ ಇವೆರಡು ಕೂಟಗಳು ಹೆಚ್ಚು ಪ್ರಬುದ್ಧಮಾನಕ್ಕೆ ಬಂದವು. ಹಾಗೆಯೇ ಹೆಚ್ಚು ಪ್ರಚಲಿತವಾಗಿರುತ್ತವೆ ಎಂಬ ಅಭಿಪ್ರಾಯವೂ ಇಂದಿಗೂ ವೈಷ್ಣವ ಪಂಥದ ಅನುಯಾಯಿ ಭಕ್ತರಲ್ಲಿ ಕಂಡುಬರುತ್ತದೆ. ಮತ್ತೇ ಹರಿದಾಸ್ಯರೇ ಆಗಿರುವಂತಹ ದಾಸಕೂಟ ಹಾಗೂ ವ್ಯಾಸಕೂಟಕ್ಕೆ ಹೆಚ್ಚು ಆಧಾರಸ್ತಂಭವಾಗಿಯೇ ನಿಂತವರು ವ್ಯಾಸರಾಯರು ಹಾಗೂ ಪುರಂದರದಾಸರು. ಹಾಗಾಗಿಯೇ ಈ ಎರಡೂ ದಾಸಕೂಟಗಳ ತತ್ವ, ಆದರ್ಶಗಳು, ಗುರಿಗಳು ಒಂದೇ ಆಗಿದ್ದವು ಎಂದು ಗುರುತಿಸಬಹುದು. ಏಕೆಂದರೆ ವೇದವಿಹಿತವಾದ ತತ್ವಗಳು ದ್ವೈತ ಸಿದ್ಧಾಂತದ ಅನುಸಾರಿಯಾಗಿಯೇ ವಿವರಿಸುವುದು, ಮತ್ತೇ ವ್ಯಾಸರ ಭಕ್ತಾಧಿ ಅನುಯಾಯಿಗಳನ್ನು ವಿವರಿಸಿದರೆ, ಪುರಂದರದಾಸರ ಅನುಯಾಯಿಗಳು ಕನ್ನಡ ಮೂಲದ ಹಾಗೂ ಆ ಮುಖೇನವಾಗಿಯೇ ಅನಿರ್ಣೀತ ತತ್ವಗಳನ್ನು ತಮ್ಮ ಕೀರ್ತನೆಗಳ ಮುಖೇನವಾಗಿಯೇ ಹೆಚ್ಚು ಹೆಚ್ಚು ಪ್ರಬುದ್ಧಮಾನಕ್ಕೆ ಹಾಗೂ ಪ್ರಚಾರಕ್ಕೂ ಕೂಟ ತಂದವರು. ಏಕೆಂದರೆ ವ್ಯಾಸಕೂಟದವರಿಂದಲೇ ಈ ದಾಸಕೂಟದವರ ಹೆಚ್ಚಿನ ರೀತಿಯಲ್ಲಿ ಪ್ರೇರಣೆ, ಪ್ರಭಾವ ಹಾಗೂ ಪೋಷಣೆಗಳನ್ನೇ ಪಡೆದುಕೊಂಡು ಆ ಮುಖೇನ ಈ ವ್ಯಾಸಕೂಟದವರೇ ದಾಸಕೂಟದ ಧ್ಯೇಯೋದ್ಧೇಶ್ಯ ಸಾಧನೆಯಲ್ಲಿ ಹೆಚ್ಚು ಭಾಗವಹಿಸಿದ್ದರು. ಆದ್ದರಿಂದಲೇ, ಮೂಲಭೂತವಾಗಿ ಈ ಎರಡು ಕೂಟಗಳಲ್ಲಿ ತಾತ್ವಿಕವಾಗಿರುವ ಯಾವುದೇ ಪ್ರಭೇದಗಳನ್ನು ಕೂಡ ಇಲ್ಲ ಎನ್ನಬಹುದು. ಈ ಎರಡೂ ಕೂಟಗಳು ಹೇಳುವುದು, ಪಠಿಸುವುದು ಹಾಗೂ ಪ್ರಚಾರ ಮಾಡುವುದು ಮಾತ್ರ ಒಂದೇ ಆಗಿರುತ್ತದೆ. ಏಕೆಂದರೆ, ಇವೆರಡೂ ಒಂದು ವೃಕ್ಷದಡಿಯಲ್ಲಿನ ಶಾಖೆಗಳೇ ಆಗಿವೆ. ಇವುಗಳ ಭಾವವೂ ಒಂದೇ ಆದರೂ ಭಾಷೆ ಮಾತ್ರ ಬೇರೆ ಬೇರೆ. ಅಂದರೆ ದಾಸಕೂಟವೂ ಕನ್ನಡ ಭಾಷೆಯಲ್ಲಿ ಪ್ರಸ್ತುತಪಡಿಸುತ್ತದೆ. ವ್ಯಾಸಕೂಟವೂ ಸಂಸ್ಕೃತ ಭಾಷೆಯಲ್ಲಿ ಹರಿಯನ್ನು ದರ್ಶನ ಮಾಡಿಸುತ್ತದೆ. ಬಹುಮುಖ್ಯವಾಗಿ ಈ ಎರಡು ಕೂಟಗಳಲ್ಲಿ ಕೆಲವು ಅಂಶಗಳನ್ನು ಈ ಮುಂದಿನಂತೆಯೇ ಗುರುತಿಸಲಾಗಿದೆ. ಅವುಗಳೆಂದರೆ; ದಾಸಕೂಟದವರಾದ ಪುರಂದರದಾಸರು, ವಿಜಯದಾಸರು, ಗೋಪಾಲದಾಸರು ಮೊದಲಾದವರು ಕನ್ನಡದಲ್ಲಿಯೇ ಕೀರ್ತನೆಗಳನ್ನು ಹಾಗೂ ಸಾಹಿತ್ಯವನ್ನು ರಚಿಸಿದ್ದಾರೆ. ಹಾಗೆಯೇ ವ್ಯಾಸಕೂಟಸ್ಥರಾದ ಶ್ರೀಪಾದರಾಯರು, ವ್ಯಾಸರಾಯ, ವಾದಿರಾಜರು ಸಂಸ್ಕೃತ ಹಾಗೂ ಕನ್ನಡ ಭಾಷೆಯಲ್ಲಿ ಕೀರ್ತನೆಗಳು ಹಾಗೂ ಸಾಹಿತ್ಯವನ್ನು ರಚಿಸಿ

ವೈಷ್ಣವ ಪಂಥಕ್ಕೆ ತಮ್ಮದೇ ಆದಂತಹ ರೀತಿಯಲ್ಲಿ ಕೊಡುಗೆಯನ್ನು ಕೂಡ ನೀಡಿದ್ದಾರೆ. ವ್ಯಾಸಕೂಟವೂ ಜ್ಞಾನ ಪ್ರತಿಪಾಧಿಕವಾಗಿ ಬಂದ ಆಕ್ಷೇಪಗಳನ್ನು ಅಡಗಿಸುವುದಕ್ಕೆ ಪ್ರಯತ್ನ ಮಾಡುತ್ತದೆ. ದಾಸಕೂಟವೂ ಬಂದಂತಹ ಆಕ್ಷೇಪಗಳು ಅಡಗಿದ ಮೇಲೆ ಪ್ರಮಾಣಗಳಿಂದ ಸಿದ್ಧವಾದಂತಹ ಕ್ರಮಗಳನ್ನು ಅನುಷ್ಠಾನಕ್ಕೆ ತರಲು ಮಾಡಿರುವ ಉಪದೇಶ ಕ್ರಮವೇ ಆಗಿರುತ್ತದೆ. ಒಟ್ಟಿನಲ್ಲಿ ವ್ಯಾಸಕೂಟದಲ್ಲಿ ದಾಸಕೂಟದ ಅಂಶಗಳು ಹಾಗೂ ದಾಸಕೂಟದಲ್ಲಿ ವ್ಯಾಸಕೂಟ ಅಂಶಗಳು ಹೇರಳವಾಗಿಯೇ ಲಭ್ಯವಾಗುತ್ತವೆ. ಇವೆರಡೂ ಕೂಡ ವೈಷ್ಣವ ಪಂಥಕ್ಕೆ ಅಪಾರವಾದ ಕೊಡುಗೆಯನ್ನೇ ನೀಡಿರುತ್ತವೆ ಎಂದು ಸಾಬೀತುಪಡಿಸಲಾಗಿದೆ.

**ಪರಾಮರ್ಶನ ಗ್ರಂಥಗಳು**


1. ಬೇಲೂರು ಕೇಶವದಾಸರು, ಶ್ರೀ ಹರಿದಾಸ ಸಾಹಿತ್ಯ, 2005
2. ಭಾಗೋಜಿ ಪಿ.ಕೆ. (ಸಂ), ದಾಸಸಾಹಿತ್ಯ ದರ್ಶನ, 2006
3. ಸೀತಾರಾಮಯ್ಯ ವಿ, ಸಮಗ್ರ ಸಾಹಿತ್ಯ ಮಾಲೆ, 2002
4. ಮೈಸೂರು ಜಿಲ್ಲಾ ಗ್ಯಾಸೆಟಿಯರ್, 1988
5. ಅನಸೂಯಿ ದೇವಿ, ವ್ಯಾಸಕೂಟ ಮತ್ತು ದಾಸಕೂಟ, 2012
6. ಅಶ್ವತ್ಥಪ್ಪ. ಕೆ.ಎನ್, ಸಮಗ್ರ ಕರ್ನಾಟಕ ಇತಿಹಾಸ (ಆರಂಭದಿಂದ ಕ್ರಿ.ಶ. 2017ರವರೆಗೆ), 2017
7. ಇಲ್ಲೂರು ಜಯರಾಮಪ್ಪ, ದಾಸಸಾಹಿತ್ಯ ಹಾಗೂ ಸಾಮಾಜಿಕ ಮೌಲ್ಯಗಳು, 1981
8. ಎಚ್ಚೆಸ್ಕೆ, ದಾಸಸಾಹಿತ್ಯ ದರ್ಶನ, ಸಮಗ್ರ ದಾಸ ಸಾಹಿತ್ಯದ ಪ್ರಥಮ ಗ್ರಂಥ, 1984
9. ಕರ್ನಾಟಕ ರಾಜ್ಯ ಗ್ಯಾಸೆಟಿಯರ್, 2010
10. ಕನ್ನಡ ವಿಷಯ ವಿಶ್ವಕೋಶ, ಸಂಪುಟ – 1, 1988
11. ಕನ್ನಡ ವಿಷಯ ವಿಶ್ವಕೋಶ – ಸಂಪುಟ 1, 2005